# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**Bruhat Bengaluru Mahanagara Palike**

ಆಯವ್ಯಯ / Budget

**2011 - 2012**

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ
## 2011–12ನೇ ಸಾಲಿನ ಆಯವ್ಯಯದ ಮಂಡನೆ

**ಶ್ರೀ ಜಿ.ಮಂಜುನಾಥ ರಾಜು,**
**ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**

*****

ಪೂಜ್ಯ ಮಹಾಪೌರರೆ, ಉಪ ಮಹಾಪೌರರೆ, ಉಪಸ್ಥಿತ ಗೌರವಾನ್ವಿತ ಸಚಿವರೆ, ಸಂಸತ್ ಸದಸ್ಯರೆ, ಶಾಸಕರುಗಳೆ, ಆಡಳಿತ ಹಾಗೂ ಪ್ರತಿಪಕ್ಷಗಳ ಮುಖಂಡರೆ, ಸಹೋದ್ಯೋಗಿ ಪಾಲಿಕೆ ಸದಸ್ಯರೆ, ಆಯುಕ್ತರೆ, ಪಾಲಿಕೆಯ ಅಧಿಕಾರಿಗಳೆ ಹಾಗೂ ಮಾಧ್ಯಮ ಪ್ರತಿನಿಧಿಗಳೆ,

ಸ್ವಾತಂತ್ರ್ಯ ಎಂದರೆ ಸಮಾನತೆ, ಸಮಾನತೆಯೇ ಸಹಬಾಳ್ವೆ, ಸಹಬಾಳ್ವೆಯೇ ಮಾನವೀಯತೆಯ ದಾರಿ, ಮಾನವೀಯತೆಯ ದಾರಿಯೇ ನಾಡಿನ ಅಭಿವೃದ್ಧಿಗೆ ಹೆದ್ದಾರಿ, ಈ ಹೆದ್ದಾರಿಯಲ್ಲಿ ಸಾಗುವುದೇ ಬಿ.ಜೆ.ಪಿ.ಯ ಪ್ರಮುಖ ಗುರಿ, ಇದರಿಂದ ಬೆಂಗಳೂರು ನಗರಕ್ಕೆ ಹಿರಿಮೆ–ಗರಿಮೆಯ **ಗರಿ**

ಇಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2011–12ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸುತ್ತಿದ್ದೇನೆ.

ಒಂದು ಕಾಲದಲ್ಲಿ ಹಳ್ಳಿಗಳ ನಗರವಾಗಿದ್ದ ಬೆಂಗಳೂರು ಇಂದು ಮೆಟ್ರೋಪಾಲಿಟನ್ ನಗರವಾಗಿ ಬದಲಾಗುತ್ತಿದೆ. ಇದು ಕಾಲದ ಮಹಿಮೆ ಮಾತ್ರವಲ್ಲ, ಆಯಕಟ್ಟಿನ ಸ್ಥಳದಲ್ಲಿ ಚಾರಿತ್ರಿಕ ಮತ್ತು ಭೌಗೋಳಿಕ ಸನ್ನಿವೇಶಗಳಿಗೆ ಪೂರಕವಾಗಿ ದೂರದೃಷ್ಟಿಯಿಂದ ಬೆಂಗಳೂರು ಎಂಬ ಮೂಲ ಬೀಜವನ್ನು ಬಿತ್ತಿದ ವೀರ ಬೆಳೆಗಾರ ಶ್ರೀ **ಕೆಂಪೇಗೌಡರಿಗೆ** ಈ ಶ್ರೇಯಸ್ಸು ಸಲ್ಲುತ್ತದೆ.

ಸರಳತೆ–ಸೌಮ್ಯತೆ, ಸ್ಪಷ್ಟತೆಯ ಪ್ರತಿರೂಪದಂತಿರುವ ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ **ಡಿ.ವಿ.ಸದಾನಂದಗೌಡರು** ಬೆಂಗಳೂರು ನಗರದ ಅಭಿವೃದ್ಧಿಗೆ ಪೂರಕವಾಗಿ ಸ್ಪಂದಿಸಿರುವುದಕ್ಕೆ ಈ ಸಂದರ್ಭದಲ್ಲಿ ಅವರನ್ನು ಅಭಿನಂದಿಸುತ್ತಾ, ಹಿಂದಿನ ಮುಖ್ಯ

ಮಂತ್ರಿಗಳಾದ ಸನ್ಮಾನ್ಯ ಶ್ರೀ **ಬಿ.ಎಸ್.ಯಡಿಯೂರಪ್ಪನವರು** ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ನಗರದ ಸರ್ವಾಂಗೀಣ ಅಭಿವೃದ್ಧಿಗೆ ನೆರವಾಗಿದ್ದಕ್ಕಾಗಿ ಅವರನ್ನು ಈ ಸಂದರ್ಭದಲ್ಲಿ ವಂದಿಸುವೆನು. ಅಬೈಡ್ ಕಾರ್ಯಪಡೆಯ ಉಪಾಧ್ಯಕ್ಷರು ಮತ್ತು ಲೋಕಸಭಾ ಸದಸ್ಯರಾದ ಸನ್ಮಾನ್ಯ ಶ್ರೀ **ಅನಂತ್‌ಕುಮಾರ್** ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಆಧುನಿಕ ಬೆಂಗಳೂರು ನಗರದ ಅಭಿವೃದ್ಧಿಗೆ ಹೆಚ್ಚಿನ ಸಹಕಾರ ನೀಡುತ್ತಿರುವ ನಮ್ಮೆಲ್ಲರ ನಾಯಕರು ಹಾಗೂ ನಗರದ ಉಸ್ತುವಾರಿ ಸಚಿವರಾದ ಸನ್ಮಾನ್ಯ **ಶ್ರೀ ಆರ್.ಅಶೋಕ್** ಹಾಗೂ ನಗರದ ಇನ್ನಿತರೆ ಸಚಿವರುಗಳಿಗೆ ವಂದಿಸುತ್ತಾ, ನಗರ ಬಿ.ಜೆ.ಪಿ. ಅಧ್ಯಕ್ಷರಾದ ಶ್ರೀ ಸುಬ್ಬನರಸಿಂಹ, ಹಾಗೂ ಜಿಲ್ಲಾ ಬಿ.ಜೆ.ಪಿ. ಅಧ್ಯಕ್ಷರಾದ **ಶ್ರೀ ಸಚ್ಚಿದಾನಂದಮೂರ್ತಿ** ಹಾಗೂ ಈ ಹಿಂದಿನ ನಗರ ಬಿ.ಜೆ.ಪಿ. ಅಧ್ಯಕ್ಷರು ಮತ್ತು ಬಜೆಟ್ ಮಂಡಿಸಲು ಹೆಚ್ಚಿನ ಆತ್ಮವಿಶ್ವಾಸ ತುಂಬಿದ ಜಯನಗರ ಶಾಸಕರಾದ **ಶ್ರೀ ಬಿ.ಎನ್.ವಿಜಯಕುಮಾರ್** ಹಾಗೂ ನನ್ನೆಲ್ಲಾ ಕೆಲಸಗಳಿಗೂ ಪ್ರೇರಕ ಶಕ್ತಿಯಾದ ಮಲ್ಲೇಶ್ವರಂ ಶಾಸಕರಾದ **ಡಾ: ಸಿ.ಎನ್.ಅಶ್ವಥ್‌ನಾರಾಯಣ** ಅವರುಗಳಿಗೆ ಈ ಸಂದರ್ಭದಲ್ಲಿ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.


ಬೆಂಗಳೂರು ನಗರದ ಜನತೆಯ ಆಶೀರ್ವಾದದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತ ಚುಕ್ಕಾಣಿ ಹಿಡಿದು ಇದೀಗ ದ್ವಿತೀಯ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಈ ಸಂದರ್ಭದಲ್ಲಿ ನಗರದ ಜನತೆಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಬೃಹತ್ ಬೆಂಗಳೂರು ಮಹಾನಗರದ ಜನತೆಯ ಆಶೋತ್ತರಗಳಿಗೆ ಸ್ಪಂದಿಸಿ ನಗರಕ್ಕೆ ಸೇರ್ಪಡೆಗೊಂಡಿರುವ 110 ಹಳ್ಳಿಗಳನ್ನು ಒಳಗೊಂಡಂತೆ 800 ಚದರ ಕಿ.ಲೋ ಮೀಟರ್‌ಗೂ ಮೀರಿ ವಿಸ್ತಾರಗೊಂಡಿರುವ ಪ್ರದೇಶದ ನಾಗರಿಕರಿಗೆ ಸೌಕರ್ಯಭರಿತ, ಉತ್ತಮ ಪರಿಸರದ ನೆಮ್ಮದಿಯ ಬದುಕಿಗೆ ಪೂರಕವಾಗಿರುವ ಆರ್ಥಿಕ ಸ್ಥಿತಿಗತಿಯ ಈ ಕೆಳಕಂಡ ಕೋಷ್ಟಕದಂತೆ ಪ್ರಮುಖ ಅಂಶಗಳನ್ನು ನಿಮ್ಮ ಮುಂದೆ ಮಂಡಿಸಲು ಇಚ್ಚಿಸುತ್ತೇನೆ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್ಥಿಕ ಸ್ಥಿತಿಗತಿ:**

| 2010–11ನೇ ಸಾಲಿನ ಪರಿಷ್ಕೃತ ಆಯವ್ಯಯ | |
|---|---|
| | ರೂ.ಕೋಟಿಗಳಲ್ಲಿ |
| ಪ್ರಾರಂಭಿಕ ಶಿಲ್ಕು | 424.72 |
| ಸ್ವೀಕೃತಿಗಳು | 3517.29 |
| ಒಟ್ಟು | 3942.01 |
| ವೆಚ್ಚಗಳು | 3856.76 |
| ದಿನಾಂಕ 31–3–2011ಕ್ಕೆ ಅಂತಿಮ ಶಿಲ್ಕು | 85.25 |
| | |
| **2011–12ರ ಆಯವ್ಯಯ ಅಂದಾಜು** | |
| | ರೂ.ಕೋಟಿಗಳಲ್ಲಿ |
| ಪ್ರಾರಂಭಿಕ ಶಿಲ್ಕು | 85.25 |
| ಸ್ವೀಕೃತಿಗಳು | 9112.30 |
| ಒಟ್ಟು | 9197.55 |
| ವೆಚ್ಚಗಳು | 9196.09 |
| ದಿನಾಂಕ 31–3–2012ಕ್ಕೆ ಅಂತಿಮ ಶಿಲ್ಕು | 1.46 |

**ಆರ್ಥಿಕ ಪರಿಸ್ಥಿತಿ : 2011–12**



## ತೆರಿಗೆ ಸಂಗ್ರಹಣೆಯಲ್ಲಿ ಸುಧಾರಣೆಗಳು:

### 1. ಆಸ್ತಿ ತೆರಿಗೆಗೆ ಭೌಗೋಳಿಕ ಮಾಹಿತಿ ವ್ಯವಸ್ಥೆಯ (GIS) ಅನುಷ್ಠಾನ:

ಜಿ.ಐ.ಎಸ್.ಆಧಾರಿತ ಆಸ್ತಿ ತೆರಿಗೆ ವ್ಯವಸ್ಥೆಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಎಲ್ಲಾ ಆಸ್ತಿಗಳನ್ನು ತೆರಿಗೆ ಜಾಲದ ವ್ಯಾಪ್ತಿಯೊಳಗೆ ತರಲಾಗಿದೆ. ಇಲ್ಲಿಯವರೆಗೆ ಆಸ್ತಿ ತೆರಿಗೆಯನ್ನು 11,02,289 ಆಸ್ತಿಗಳಿಂದ ಸಂಗ್ರಹಿಸಲಾಗುತ್ತಿತ್ತು. ಈಗ ಜಿ.ಐ.ಎಸ್ ಜಾಲದೊಳಗೆ 15,12,580 ಆಸ್ತಿಗಳನ್ನು ತರಲಾಗಿದೆ. ಇದರಿಂದ ಆಸ್ತಿ ತೆರಿಗೆ ಸಂಗ್ರಹ 2011–12ನೇ ಸಾಲಿನಲ್ಲಿ **ರೂ.1500.00 ಕೋಟಿ** ತಲುಪಲಿದೆ ಎಂದು ಅಂದಾಜಿಸಲಾಗಿದೆ. ಎಲ್ಲಾ ಅನುದಾನರಹಿತ ಶಾಲೆಗಳು, ಕಾಲೇಜುಗಳು ಮತ್ತು ಕಲ್ಯಾಣ ಮಂಟಪಗಳು, ಖಾಸಗಿ ಆಸ್ಪತ್ರೆಗಳು, ಸರ್ವಿಸ್ ಅಪಾರ್ಟ್‌ಮೆಂಟ್‌ಗಳ ತೆರಿಗೆಯನ್ನು ವಾಣಿಜ್ಯ ದರಗಳಲ್ಲಿ ಪರಿಗಣಿಸಲಾಗುವುದು. ಆದಾಯ ಸೋರುವಿಕೆಯನ್ನು ತಡೆಗಟ್ಟಲು, ಕಂದಾಯ ತೆರಿಗೆ ಅಧಿಕಾರಿಗಳ ತಂಡ ಸ್ವಯಂ ಘೋಷಿತ ಆಸ್ತಿ ತೆರಿಗೆ ಯೋಜನೆಯಡಿ ಬರುವ ಆಸ್ತಿಗಳ ಪೈಕಿ ಶೇ.30ರಷ್ಟು ಆಸ್ತಿಗಳನ್ನು ತಪಾಸಿಸುತ್ತಾರೆ. ಕಡಿಮೆ ತೆರಿಗೆ ಕಟ್ಟಲು, ತಮ್ಮ ಆಸ್ತಿಗಳನ್ನು ಉದ್ದೇಶಪೂರ್ವಕವಾಗಿ ಕಡಿಮೆ ಮೊತ್ತಕ್ಕೆ ನಿಗದಿ ಮಾಡಿದ್ದರೆ, ಅಂತಹ ಆಸ್ತಿದಾರರ ವಿರುದ್ಧ ಕಠಿಣ ಕ್ರಮ ತೆಗೆದುಕೊಂಡು ತೆರಿಗೆ ವಸೂಲಿ ಮಾಡಲಾಗುವುದು.

### 2. ಆಪ್ಟಿಕಲ್ ಫೈಬರ್ ಕೇಬಲ್ ನೀತಿ:

ಬೆಂಗಳೂರಿನಲ್ಲಿ ಅನೇಕ ಟೆಲಿಕಾಂ ಕಂಪನಿಗಳು ಕಾರ್ಯಾಚರಣೆ ನಡೆಸುತ್ತಿವೆ. ಸದರಿ ಕೇಬಲ್‌ಗಳು ಮಳೆ ನೀರಿನ ಚರಂಡಿಗಳ ಮೂಲಕ, ಹಾಗೂ ನೆಲದೊಳಗೆ ಸಹಸ್ರಾರು ಕಿಲೋಮೀಟರ್ ಉದ್ದದವರೆಗೂ ಸಾಗುತ್ತವೆ. ಆದರೆ ಈ ಸಂಸ್ಥೆಗಳು ಪಾಲಿಕೆಗೆ ಯಾವುದೇ ರೀತಿಯ ಬಾಡಿಗೆ ನೀಡುತ್ತಿಲ್ಲ. ಆದ್ದರಿಂದ, ಆಪ್ಟಿಕಲ್ ಫೈಬರ್‌ಗೆ ಸಂಬಂಧಿಸಿದ ವಹಿವಾಟನ್ನು ಪಾಲಿಕೆಯ ತೆರಿಗೆ ವ್ಯಾಪ್ತಿಯೊಳ'ಗೆ ತರಲು ಹೊಸ ನೀತಿಯನ್ನು ಜಾರಿಗೆ ತರಲು ತೀರ್ಮಾನಿಸಿದ್ದು, ಈ ಮೂಲಕ ಆಪ್ಟಿಕಲ್ ಫೈಬರ್ ಕೇಬಲ್‌ಗಳ ಬಾಡಿಗೆಯಿಂದ ವರ್ಷಕ್ಕೆ **ರೂ.780.00 ಕೋಟಿ** ಆದಾಯ ನಿರೀಕ್ಷಿಸಲಾಗಿದೆ.

### 3. ಜಾಹೀರಾತು ನೀತಿ:

ಪಾಲಿಕೆಯ ಕೌನ್ಸಿಲ್ ಸಭೆಯು ಒಂದು ಹೊಸ ಜಾಹೀರಾತು ನೀತಿಯನ್ನು ಅನುಮೋದಿಸಿದೆ. ಈ ಹೊಸ ಜಾಹೀರಾತು ನೀತಿಯ ಪ್ರಕಾರ, ಎಲ್ಲಾ ಜಾಹೀರಾತು ಫಲಕ (ಹೋರ್ಡಿಂಗ್) ಗಳನ್ನು ಟೆಂಡರ್ ಕಂ ಹರಾಜು ಪ್ರಕ್ರಿಯೆ ಮೂಲಕ ಮಾಡಲಾಗುತ್ತದೆ ಮತ್ತು ಖಾಸಗಿ ಆಸ್ತಿಗಳಲ್ಲಿರುವ ಜಾಹೀರಾತು ಫಲಕ (ಹೋರ್ಡಿಂಗ್) ಗಳ ಹಕ್ಕುಗಳನ್ನು ಹರಾಜು ಮಾಡಲಾಗುತ್ತದೆ. ಇದರಿಂದ ಹೆಚ್ಚಿನ ಪಾರದರ್ಶಕತೆ ಪ್ರದರ್ಶಿತವಾಗಲಿದ್ದು, **ರೂ.150.00 ಕೋಟಿ** ಹೆಚ್ಚುವರಿ ಆದಾಯ ಸಂಗ್ರಹವಾಗುವ ನಿರೀಕ್ಷೆಯಿದೆ.

## 4. ವ್ಯಾಪಾರ ಪರವಾನಗೆ ಶುಲ್ಕ:

ಬಿಟ್ಟು ಹೋಗಿರುವ ವ್ಯಾಪಾರ ಪರವಾನಗೆಗಳನ್ನು ತೆರಿಗೆ ಜಾಲದೊಳಕ್ಕೆ ತರಲು ಪಾಲಿಕೆಯು ವ್ಯಾಪಕ ಪ್ರಚಾರ ಅಂದೋಲನವನ್ನು ಕೈಗೊಳ್ಳುತ್ತಿದೆ. ಇದರ ಮೂಲಕ 4.00 ಲಕ್ಷಕ್ಕೂ ಅಧಿಕ ವ್ಯಾಪಾರಿಗಳನ್ನು ಆವರಿಸುವ ಗುರಿ ಹೊಂದಿದೆ. ಸರ್ಕಾರದಿಂದ ಮೌಲ್ಯವರ್ಧಿತ ತೆರಿಗೆ ಪರವಾನಿಗೆ (VAT) ನೀಡುವ ಮುನ್ನ ಪೂರ್ವಾಗತ್ಯವಾಗಿ ವ್ಯಾಪಾರ ಪರವಾನಗಿಯನ್ನು ಬೆಸೆಯಲು ವಾಣಿಜ್ಯ ತೆರಿಗೆ ಇಲಾಖೆಯೊಂದಿಗೆ ಸಮಾಲೋಚನೆ ನಡೆದಿದೆ. ಇದರಿಂದ 2011–12 ಸಾಲಿನಲ್ಲಿ **ರೂ.85.00 ಕೋಟಿ** ಆದಾಯ ನಿರೀಕ್ಷಿಸಲಾಗಿದೆ.

## 5. ಅನುದಾನಗಳು:

- **ನಗರೋತ್ಥಾನ ಯೋಜನೆ:** ರಾಜ್ಯ ಸರ್ಕಾರವು 2011–12ರ ಅವಧಿಯಲ್ಲಿ ಪಾಲಿಕೆಯ ಈ ಕೆಳಗಿನ ಯೋಜನೆಗಳಿಗಾಗಿ ರೂ.250.00 ಕೋಟಿಗಳನ್ನು ಅನುದಾನದಲ್ಲಿ ಕಾಯ್ದಿರಿಸಿದೆ.
  - ಕಾರ್ಡ್ ರಸ್ತೆ, ಫ್ಲೌಂಟೇನ್ ವೃತ್ತ, ಕನಕಪುರ – ಹೊರ ವರ್ತುಲ ರಸ್ತೆ ಜಂಕ್ಷನ್ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವೃತ್ತಗಳಲ್ಲಿ ಫ್ಲೈ ಓವರ್ ಮತ್ತು ಅಂಡರ್‌ಪಾಸ್‌ಗಳ ನಿರ್ಮಾಣ
  - ಆಯ್ದ ಸ್ಥಳಗಳಲ್ಲಿ ಆರ್‌ಒಬಿ/ಅರ್‌ಯುಬಿ ಗಳ ನಿರ್ಮಾಣ
  - ಇತರೇ ಆಯ್ದ 50 ಸ್ಥಳಗಳಲ್ಲಿ ಫ್ಲೈ ಓವರ್/ಅಂಡರ್‌ಪಾಸ್‌ಗಳು
  - 4 ಮಳೆ ನೀರು ಕಣಿವೆಗಳ ಪುನರ್ ನಿರ್ಮಾಣ/ಅಭಿವೃದ್ದಿ
  - ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾದ ಪ್ರದೇಶಗಳಿಗೆ ನೀರು ಸರಬರಾಜು ವ್ಯವಸ್ಥೆಯ ಕಾಮಗಾರಿಗಳು

- **13 ನೇ ಹಣಕಾಸು ಆಯೋಗ:**
  ರಾಜ್ಯ ಸರ್ಕಾರವು 2011–12ನೇ ಸಾಲಿನ ಆಯವ್ಯಯದಲ್ಲಿ ಪಾಲಿಕೆಯ ಈ ಕೆಳಗಿನ ಯೋಜನೆಗಳಿಗಾಗಿ **ರೂ.173.95** ಕೋಟಿಗಳನ್ನು ಕಾಯ್ದಿರಿಸಿದೆ:
  - ವಾಹನ ನಿಲುಗಡೆ ನಿರ್ಮಾಣ ಮತ್ತು ಜಂಕ್ಷನ್‌ಗಳ ಅಭಿವೃದ್ಧಿ,
  - ಘನತ್ಯಾಜ್ಯ ವಸ್ತು ನಿರ್ವಹಣೆ (SWM) ಕಾಮಗಾರಿಗಳಿಗೆ
  - ರಸ್ತೆಗಳು ಮತ್ತು ಸೇತುವೆಗಳ ನಿರ್ಮಾಣ
  - ಇತರೇ ಅಭಿವೃದ್ಧಿ ಕಾಮಗಾರಿಗಳು

- **ರಾಜ್ಯ ಹಣಕಾಸು ಆಯೋಗದ (SFC) ಅನುದಾನಗಳು:**

ರಾಜ್ಯ ಸರ್ಕಾರ 2011–12ನೇ ಸಾಲಿನಲ್ಲಿ ವೇತನ, ವಿದ್ಯುತ್, ನಿವೃತ್ತಿ ವೇತನ ಮತ್ತು ಇತರ ವೆಚ್ಚಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ **ರೂ.428.00 ಕೋಟಿ**ಗಳನ್ನು ಕಾಯ್ದಿರಿಸಿದೆ.

- **ಜೆ.ಎನ್.ಎನ್.ಯು.ಆರ್.ಎಂ. *(Jn nurm)* ಅನುದಾನಗಳು:**

**ಜೆ.ಎನ್.ಎನ್.ಯು.ಆರ್.ಎಂ** (J*nnurm*) ಅನುದಾನಗಳ ಅಡಿಯಲ್ಲಿ ಮೂಲಭೂತ ಸೌಲಭ್ಯ ಕಾಮಗಾರಿಗಳನ್ನು ಪೂರ್ಣಗೊಳಿಸಲು **ರೂ.216.00 ಕೋಟಿ**ಗಳನ್ನು ಒದಗಿಸಲಾಗಿದೆ.

- **ವಿಶೇಷ ಅಭಿವೃದ್ಧಿ ಅನುದಾನಗಳು:**

ಬೆಂಗಳೂರು ನಗರವು ಎಲ್ಲಾ ಕ್ಷೇತ್ರಗಳಲ್ಲಿ ಭಾರಿ ಅಭಿವೃದ್ಧಿ ಕಾಣುತ್ತಿದೆ. ಅದನ್ನು ಎದುರಿಸಲು ಮೂಲಭೂತ ಸೌಕರ್ಯಗಳು ಉತ್ತಮಗೊಳ್ಳಬೇಕು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಏಕಾಂಗಿಯಾಗಿ, ತನ್ನ ಸಂಪನ್ಮೂಲಗಳ ಆಧಾರದ ಮೇಲೆ ಅಂತಹ ಬೃಹತ್ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಕರ್ನಾಟಕ ಸರ್ಕಾರವನ್ನು ವಿಶೇಷ ಅಭಿವೃದ್ಧಿ ಅನುದಾನವಾಗಿ **ರೂ.1500.00 ಕೋಟಿ**ಗಳನ್ನು ನೀಡುವಂತೆ ಕೋರಲಾಗಿದೆ.

## 6. ಕಲ್ಯಾಣ ಕಾರ್ಯಕ್ರಮಗಳು:

**"ನೀನು ಶ್ರೀಮಂತನಿದ್ದು ನಿನ್ನ ನೆರೆಯವನು ಬಡವನಿದ್ದರೆ ನಿನಗೆ ಎಂದೂ ನೆಮ್ಮದಿ ಸಿಗಲಾರದು. ಅವನನ್ನು ನಿನ್ನ ಜೊತೆಯಲ್ಲಿ ಅಭಿವೃದ್ದಿಯ ದಾರಿಯಲ್ಲಿ ಕೊಂಡೊಯ್ಯುವುದು ಅನಿವಾರ್ಯ, ಇಲ್ಲದಿದ್ದರೆ ಅವನೂ ಬೆಳೆಯಲಾರ ನೀನು ಬೆಳೆಯಲಾರೆ"** ಎಂಬ ಗಾಂಧೀಜಿಯವರ ಮಾತು ಸ್ಮರಣೀಯ.

ಸಮಾಜದ ನಿರ್ಲಕ್ಷಕ್ಕೆ ಒಳಗಾದ ವರ್ಗಗಳನ್ನು ಮೇಲೆತ್ತಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಕೆಳಗಿನ ಕಾರ್ಯಕ್ರಮಗಳಿಗಾಗಿ ರೂ.791.00 ಕೋಟಿಗಳನ್ನು ಆಯವ್ಯಯದಲ್ಲಿ ಮೀಸಲಿರಿಸಿದೆ.

- ***"ಬೀದಿ ಕಸಗುಡಿಸುವ ಬಡವನ ಎದೆಯಲ್ಲಿ ನಾನಿರುವೆ"***

ಶೇ.22.75%ರ ಅಡಿಯಲ್ಲಿ ಕೈಗೊಳ್ಳುವ ಕಾರ್ಯಕ್ರಮಗಳಿಗೆ **ರೂ.483.00 ಕೋಟಿ**ಗಳನ್ನು ಪ್ರಸ್ತಾಪಿಸಲಾಗಿದೆ. ಈ ಕಾರ್ಯಕ್ರಮಗಳಲ್ಲಿ ಒಂಟಿ ಮನೆಗಳ ನಿರ್ಮಾಣ, ವೃತ್ತಿಪರ ತರಬೇತಿ ಕೋರ್ಸ್‌ಗಳು, ಕ್ರೀಡಾ ಚಟುವಟಿಕೆಗಳಿಗೆ ನೆರವು, ಶುಲ್ಕ ಮರುಪಾವತಿ, ಉನ್ನತ ವ್ಯಾಸಂಗಕ್ಕೆ ನೆರವು, ಸಬ್ಸಿಡಿ ನೀಡುವಿಕೆ, ಸ್ವ–ಉದ್ಯೋಗಗಳನ್ನು ಪ್ರೋತ್ಸಾಹಿಸಲು ಸಾಲ ಸಂಬಂಧಿತ ಸಬ್ಸಿಡಿ, ಕುಶಲ ಫಲಾನುಭವಿಗಳಿಗೆ ವಿಶೇಷ ಕಿಟ್‌ಗಳನ್ನು ವಿತರಿಸುವುದು, ಇತ್ಯಾದಿಗಳು ಒಳಗೊಂಡಿರುತ್ತವೆ.

- **ಮಾನವ ತನ್ನ ಜೊತೆಯವರ ಹಿತಕ್ಕಾಗಿ ದುಡಿದಷ್ಟೂ ದೊಡ್ಡವನಾಗುತ್ತಾನೆ............**

2011–12ನೇ ಸಾಲಿನ ಶೇ.22.75ರ ಅನುದಾನದಲ್ಲಿ ಈಗಾಗಲೇ ಜಾರಿಗೊಂಡಿರುವ "ಡಾ: ಬಿ.ಆರ್.ಅಂಬೇಡ್ಕರ್ ಗೃಹ ನಿರ್ಮಾಣ ಯೋಜನೆ" ಯಂತೆ ನಗರದ ಪರಿಶಿಷ್ಟ ಜಾತಿ/ಪಂಗಡದ ಜನರಿಗೆ ಮನೆಗಳನ್ನು ನಿರ್ಮಿಸಿ ಕೊಡಲಾಗುವುದು. 2010–11ನೇ ಸಾಲಿನಲ್ಲಿ 8684 ಮನೆಗಳು ಪೂರ್ಣಗೊಂಡಿದ್ದು, 1316 ಮನೆಗಳ ನಿರ್ಮಾಣ ಪ್ರಗತಿಯಲ್ಲಿವೆ. ಸದರಿ ಯೋಜನೆಯನ್ನು ಪ್ರಸಕ್ತ ಸಾಲಿನಲ್ಲಿಯೂ ಸಹ ಮುಂದುವರೆಸಲಾಗುವುದು.

- **“ದೀನರು, ದಲಿತರು, ಅಮಾಯಕರು, ಅನಾಥರ ಜೊತೆಯಲ್ಲಿ ಸದಾ ನಾನಿರುವೆ”**

  ಪ್ರಸಕ್ತ ಸಾಲಿನಲ್ಲಿ ನಿರಾಶ್ರಿತರಿಗೆ **ರಾತ್ರಿ ತಂಗುದಾಣಗಳನ್ನು** ನಿರ್ಮಿಸಲಾಗುವುದು, ಇದಕ್ಕಾಗಿ ನಗರದ ಹಲವೆಡೆ ತಂಗು ದಾಣಗಳನ್ನು ನಿರ್ಮಿಸಲು ಯೋಜನೆಗಳನ್ನು ರೂಪಿಸಲಾಗುವುದು.

- **“ಶ್ರಮ ಜೀವಿಯ ಮನದಲ್ಲಿ ನೆಲೆಸಿರುವೆ”:**

  ಕೂಲಿ ಕೆಲಸ ಮಾಡುವ ಶ್ರಮಿಕ ವರ್ಗದವರಿಗೆ **ಆಶ್ರಯ**ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಕಲ್ಯಾಣ ಕರ (ಸೆಸ್) ನಿಧಿಯನ್ನು ಬಳಸಿಕೊಳ್ಳುವ ಕುರಿತು ಕರ್ನಾಟಕ ರಾಜ್ಯ ಕಟ್ಟಡಗಳ ಮತ್ತು ಇತರ ಕಾರ್ಮಿಕರ ಕಲ್ಯಾಣ ಇಲಾಖೆಗಳೊಂದಿಗೆ ಮಾತುಕತೆ ನಡೆಯುತ್ತಿದೆ. ಕೂಲಿ ಕೆಲಸ ಮಾಡುವವರಿಗೆ ಸಂಚಾರಿ ಶಾಲೆಗಳು ಮತ್ತು ಸಂಚಾರಿ ಆರೋಗ್ಯ ರಕ್ಷಣಾ ಕೇಂದ್ರಗಳ ಸ್ಥಾಪನೆಯ ಪ್ರಸ್ತಾಪವೂ ಇದೆ.

## 7. ಪಂಡಿತ್ ದೀನ ದಯಾಳು ಗೃಹ ಯೋಜನೆ:

**“ನೆಲೆ–ನೆಮ್ಮದಿ”** : ನಗರದ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ ಮೊಟ್ಟ ಮೊದಲ ಬಾರಿಗೆ **“ಪಂಡಿತ ದೀನದಯಾಳು ಉಪಾಧ್ಯಾಯ ಗೃಹ ನಿರ್ಮಾಣ ಯೋಜನೆ”** ಮೂಲಕ ವಸತಿ ಮನೆಗಳನ್ನು ನಿರ್ಮಿಸಿ ಆರ್ಥಿಕವಾಗಿ ಹಿಂದುಳಿದ ವರ್ಗದ ಜನರಿಗೆ ನೆಲೆ – ನೆಮ್ಮದಿ ಕಲ್ಪಿಸಲಾಗುವುದು. ಬೆಂಗಳೂರಿನಲ್ಲಿ ಸ್ವಂತ ಮನೆ ಎಂಬುದು ಆರ್ಥಿಕವಾಗಿ ಹಿಂದುಳಿದವರಿಗೆ ಕೈಗೆಟುಕದ ಕನಸಾಗಿದೆ. ಅವರ ಕನಸುಗಳನ್ನು ನನಸಾಗಿಸಲು ಪಾಲಿಕೆಯು ಆ ವರ್ಗಗಳ ಜನರಿಗೆಂದೇ ಮನೆಗಳ ನಿರ್ಮಾಣ ಮಾಡುತ್ತಿದೆ. ಇದಕ್ಕಾಗಿ 2011–12ನೇ ಸಾಲಿನ ಆಯವ್ಯಯದಲ್ಲಿ ಪ್ರತಿ ವಾರ್ಡಿಗೆ 25 ಮನೆಗಳ ಲೆಕ್ಕದಲ್ಲಿ **5,000 ಮನೆಗಳನ್ನು** ನಿರ್ಮಿಸಲಾಗುವುದು. ಸದರಿ ಕಾರ್ಯಕ್ರಮಕ್ಕೆ 2011–12ನೇ ಸಾಲಿನಲ್ಲಿ **ರೂ. 150.00 ಕೋಟಿ**ಗಳನ್ನು ಪ್ರಸ್ತಾಪಿಸಲಾಗಿದೆ.

## 8. ವಾಜಪೇಯಿ ಆರೋಗ್ಯಶ್ರೀ ವೈದ್ಯಕೀಯ ವಿಮಾ ಯೋಜನೆ:

**“”ವಾಜಪೇಯಿ ಆರೋಗ್ಯ ಶ್ರೀ”** ವೈದ್ಯಕೀಯ ವಿಮಾ ಯೋಜನೆ ಒಂದು ವಿನೂತನ ವೈದ್ಯಕೀಯ ವಿಮಾ ವ್ಯವಸ್ಥೆ ಈ ಕೆಳಗಿನ ವರ್ಗಗಳ ಜನರ ಉಪಯೋಗಕ್ಕಾಗಿ ತಕ್ಷಣದಿಂದ ಜಾರಿಗೆ ತರಲಾಗುವುದು.

- ಬಿಪಿಎಲ್ ಕುಟುಂಬಗಳು
- ಎಸ್‌ಸಿ/ಎಸ್‌ಟಿ ವರ್ಗಗಳು
- ವಿಕಲಚೇತನರು
- ಆಟೋ ಚಾಲಕರು
- ವಿಧವೆಯರು

- ಪೌರ ಕಾರ್ಮಿಕರು
- ಸಫಾಯಿ ಕರ್ಮಚಾರಿಗಳು
- ಕೊಳಗೇರಿ ನಿವಾಸಿಗಳು
- ಲೈಂಗಿಕ ಅಲ್ಪಸಂಖ್ಯಾತರು
- ಕಟ್ಟಡದ ಕಾರ್ಮಿಕರು

ನಗರದಲ್ಲಿ ಆರೋಗ್ಯದ ಅರಿವು ಹೆಚ್ಚಿಸುವ ಕಾರ್ಯಕ್ರಮದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳು, ಜಾಗೃತಿ ಮತ್ತು ಸ್ವಚ್ಚತೆಯ ಅರಿವು ಮೂಡಿಸುವ ಕಾಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಿಂದ ಬೆಂಗಳೂರಿನ **7 ಲಕ್ಷ ಕುಟುಂಬ**ಗಳಿಗೆ ಪ್ರಯೋಜನವಾಗಲಿದೆ ಈ ಉದ್ದೇಶಕ್ಕಾಗಿ 2011–12ರಲ್ಲಿ **ರೂ.20.00 ಕೋಟಿ**ಗಳನ್ನು ಮೀಸಲಿರಿಸಿದೆ.

ಪಾಲಿಕೆಯ ಸದಸ್ಯರ ವಿವೇಚಾನಾಧೀನಕ್ಕೆ ಒಳಪಟ್ಟು ವೈದ್ಯಕೀಯ ಅನುದಾನವನ್ನು ಪ್ರತಿ ವಾರ್ಡ್‌ಗೆ ರೂ.4.00 ಲಕ್ಷಗಳನ್ನು ಮೀಸಲಿರಿಸಿದೆ.

## 9. ಬಾಲಕಿಯರಿಗೆ ಉಚಿತ ಆರೋಗ್ಯ ಕಿಟ್:

ನಗರದಲ್ಲಿರುವ ಪಾಲಿಕೆಯ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಾಲಕಿಯರಿಗೆ ಉತ್ತಮ ಶುಚಿತ್ವ/ಆರೋಗ್ಯ ಕಾಪಾಡಿಕೊಳ್ಳುವ ಸಲುವಾಗಿ ಶುಚಿತ್ವದ ಕಿಟ್‌ಗಳನ್ನು ಉಚಿತವಾಗಿ ಮಹಿಳಾ ಶಿಕ್ಷಕಿಯರ ಮೂಲಕ ಆಯಾ ಶಾಲೆಗಳಲ್ಲಿ ದೊರೆಯುವ ವ್ಯವಸ್ಥೆ ಮಾಡಲಾಗುವುದು. ಇದು ದೇಶದಲ್ಲೇ ಪ್ರಥಮ ವ್ಯವಸ್ಥೆಯಾಗಿರುತ್ತದೆ.

## 10. ಸಂಸ್ಕೃತಿ ಸಂಭ್ರಮ:

ಬೆಂಗಳೂರಿನ ಪಾರಂಪರಿಕ ಉತ್ಸವಗಳಾದ ಕಡಲೇಕಾಯಿ ಪರಿಷೇ, ಬೆಂಗಳೂರು ಕರಗ, ದಸರಾ, ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುವುದರ ಮೂಲಕ ಬೆಂಗಳೂರಿನ ಸಾಂಸ್ಕೃತಿಕ ಮೆರಗನ್ನು ಹೆಚ್ಚಿಸಲಾಗಿದೆ. ಇದಕ್ಕಾಗಿ ವಿಶೇಷ ಅನುದಾನವನ್ನು ನೀಡಲಾಗುವುದು.

## 11. ಮಳೆ ನೀರು ಕೊಯ್ಲು:

ಬೆಂಗಳೂರು ನಗರ 410 ಎಮ್.ಎಲ್.ಡಿ ಯಷ್ಟು ನೀರಿನ ಕೊರತೆಯನ್ನು ಎದುರಿಸುತ್ತಿದೆ. ಬೆಂಗಳೂರು ನಗರ 800 ಚದರ ಕಿ.ಮೀ ಭೌಗೋಳಿಕ ಪ್ರದೇಶದಲ್ಲಿ 923 ಮಿ.ಮೀ ಮಳೆ ಪಡೆಯುತ್ತಿದೆ.

ಇಲ್ಲಿ 849.67 ಎಮ್.ಎಲ್.ಡಿ ಯಷ್ಟು ನೀರನ್ನು ಕೊಯ್ಲು ಮಾಡಬಹುದು. ನೀರನ್ನು ಉಳಿಸಿ, ರಕ್ಷಿಸಲು, ಪಾಲಿಕೆಯು ತನ್ನ ಎಲ್ಲಾ ಕಚೇರಿ, ಉದ್ಯಾನ, ಮತ್ತು ಆಟದ ಮೈದಾನಗಳಲ್ಲೂ ಮಳೆ

ನೀರಿನ ಕೊಯ್ಲು ಪದ್ಧತಿ ಅಳವಡಿಸಿಕೊಳ್ಳುವುದು ಕಡ್ಡಾಯಗೊಳಿಸಿದೆ. ಈ ಉದ್ದೇಶಕ್ಕಾಗಿ 2011-12ರಲ್ಲಿ **ರೂ.20.00 ಕೋಟಿ**ಗಳನ್ನು ಪ್ರಸ್ತಾಪಿಸಲಾಗಿದೆ.

ನಾಗರೀಕರೂ ಸಹ ಈ ಪದ್ಧತಿಯನ್ನು ಅಳವಡಿಸಿಕೊಳ್ಳುವಂತೆ ಉತ್ತೇಜನ ನೀಡಲು ಸದರಿ ಪದ್ಧತಿಯನ್ನು ಅಳವಡಿಸಿಕೊಂಡ ಎಲ್ಲಾ ಕಟ್ಟಡಗಳಿಗೆ ಆಸ್ತಿ ತೆರಿಗೆಯಲ್ಲಿ ಶೇ.2% ರಿಯಾಯ್ತಿಯನ್ನು ನೀಡಲು ಉದ್ದೇಶಿಸಲಾಗಿದೆ.

## 12. ಘನ ತ್ಯಾಜ್ಯ ನಿರ್ವಹಣೆ:

'ಒಂದು ಸಮಾಜವನ್ನು ವ್ಯಾಖ್ಯಾನಿಸಲು ಅದು ಏನನ್ನು ಸೃಷ್ಟಿಸುತ್ತದೆ ಎನ್ನುವುದರಿಂದಲ್ಲ ಬದಲಿಗೆ ಅದು ಏನನ್ನು ನಾಶಪಡಿಸಲು ಒಪ್ಪುವುದಿಲ್ಲ ಎನ್ನುವುದರಿಂದ' ಬೆಂಗಳೂರು ನಗರ ಪ್ರತಿ ದಿನ 3500 ಮೆಟ್ರಿಕ್ ಟನ್ ಗಳಷ್ಟು ಘನ ತ್ಯಾಜ್ಯ ಉತ್ಪಾದಿಸುತ್ತದೆ. ಬೆಂಗಳೂರಿನಂತಹ ನಗರದಲ್ಲಿ ಇಷ್ಟು ತ್ಯಾಜ್ಯವನ್ನು ವಿಲೇವಾರಿ ಮಾಡುವುದು ಬಹು ದೊಡ್ಡ ಸವಾಲೇ ಸರಿ. ಈ ಸಮಸ್ಯೆಯನ್ನು ಪರಿಹರಿಸಲು 2011-12ರಲ್ಲಿ ಈ ಕೆಳಕಂಡ ಪ್ರಯತ್ನಗಳನ್ನು ಮಾಡಲಾಗುವುದು:

- ಸಾರ್ವಜನಿಕ ಸಹಭಾಗಿತ್ವದೊಂದಿಗೆ (PPP) ಭೂ ಭರ್ತಿ ಸ್ಥಳಗಳಲ್ಲಿ ತ್ಯಾಜ್ಯವನ್ನು ಪ್ರತ್ಯೇಕಿಸುವ ಯಂತ್ರವನ್ನು ಸ್ಥಾಪಿಸುವುದು
- ಮೀಥೇನ್ ಅನಿಲದ ಮೂಲಕ ಶಕ್ತಿ ಉತ್ಪಾದನೆ ಮಾಡುವ ಯಂತ್ರದ ಸ್ಥಾಪನೆ
- ಬೃಹತ್ ಮಿಶ್ರಗೊಬ್ಬರದ ಘಟಕಗಳ ನಿರ್ಮಾಣ
- ಪ್ರಾಯೋಗಿಕ ಹಂತದಲ್ಲಿ, ಡಬ್ಬವನ್ನೇ ಎತ್ತಬಹುದಾದ ಕಾಂಪ್ಯಾಕ್ಟರ್ ಯಂತ್ರಗಳನ್ನು ಖರೀದಿಸಲಾಗುವುದು.
- ಭಾರತ್ ಅಟಾಮಿಕ್ ರಿಸರ್ಚ್ ಸೆಂಟರ್ (ಬಿಎಆರ್‌ಸಿ) ಸಹಯೋಗದಲ್ಲಿ ಬಯೊ-ಮೆಥನಾಲ್ ಘಟಕವನ್ನು ಹಲವಾರು ಕೇಂದ್ರಗಳಲ್ಲಿ ಸ್ಥಾಪಿಸಲಾಗುವುದು
- 750 ಟನ್ ಸಾಮರ್ಥ್ಯದ ಸ್ವಯಂಚಾಲಿತ ಯಂತ್ರವನ್ನು ಶಕ್ತಿ ಉತ್ಪಾದನೆಗಾಗಿ ಸ್ಥಾಪಿಸಲಾಗುವುದು
- ಒಣ ತ್ಯಾಜ್ಯವನ್ನು ಪ್ರತ್ಯೇಕಿಸುವ ಕೇಂದ್ರ/ಸಾವಯವ ತ್ಯಾಜ್ಯ ಪರಿವರ್ತಕದ ಸ್ಥಾಪನೆಗೆ **ಪ್ರತಿ ವಾರ್ಡಿಗೆ ರೂ.25.00 ಲಕ್ಷ** ಕಾಯ್ದಿರಿಸಲಾಗಿದೆ.

## 13. ಮೂಲಭೂತ ಸೌಕರ್ಯಗಳ ಯೋಜನೆಗಳು:

ನೀವು ಒಂದು ನಗರವನ್ನು ನೋಡಿದರೆ, ಅಲ್ಲಿ ನಿಮಗೆ ಕಾಣಸಿಗುವುದು ಅದನ್ನು ನಿರ್ಮಿಸಿದವರ ನಂಬಿಕೆಗಳು ಮತ್ತು ಆಕಾಂಕ್ಷೆಗಳು. ಮಹಾನ್ ನಾಗರಿಕತೆಗಳೆಲ್ಲಾ ನಿರ್ಮಾಣವಾಗಿರುವುದು ಉತ್ತಮ ಮೂಲಭೂತ ಸೌಕರ್ಯಗಳ ಬುನಾಧಿಯ ಮೇಲೆ. ಕಟ್ಟಡಗಳು ಮಾನವರ ಸಂಬಂಧಗಳನ್ನು ಬೆಸೆಯುತ್ತದೆ. ಮೂಲಭೂತ ಸೌಲಭ್ಯಗಳು ಸರಳಗೊಳಿಸಬೇಕೇ ವಿನಾ ಕೆಡಿಸಬಾರದು. ಆಧುನಿಕ, ಸಾಮರಸ್ಯವುಳ್ಳ ಮತ್ತು ಉಲ್ಲಾಸಕಾರಿ ಮೂಲಭೂತ ಸೌಕರ್ಯಗಳು

ಪ್ರಜಾಪ್ರಭುತ್ವ ಸರಿಯಾಗಿ ಕೆಲಸ ಮಾಡುತ್ತಿದೆ ಎಂಬುದರ ಸಂಕೇತ. ಈ ಹಿನ್ನೆಲೆಯಲ್ಲಿ, ಬೆಂಗಳೂರಿನ ನಾಗರಿಕರ ಬದುಕನ್ನು ಉತ್ತಮಗೊಳಿಸಲು ಪಾಲಿಕೆಯು ಸದಾ ಬದ್ಧವಾಗಿದೆ.

- 5 ಫ್ಲೈ ಓವರ್/ಗ್ರೇಡ್ ಸಪರೇಟರ್: ಬನಶಂಕರಿ ದೇವಸ್ಥಾನ ಮತ್ತು ವರ್ತುಲ ರಸ್ತೆ ಕೂಡುವ ಸ್ಥಳದಲ್ಲಿ, ಕೋರಮಂಗಲದ ಸೋನಿ ವರ್ಲ್ಡ್ ಜಂಕ್ಷನ್, ಮಲ್ಲೇಶ್ವರಂನಲ್ಲಿ ಮಾರಮ್ಮ ವೃತ್ತ, ರಾಜಾಜಿನಗರದ ಕಾರ್ಡ್ ರಸ್ತೆ ಮತ್ತು ವಾಟಾಳ್ ನಾಗರಾಜ್ ರಸ್ತೆಗಳಲ್ಲಿ ಫ್ಲೈ ಓವರ್ / ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸುವ ಉದ್ದೇಶವಿದೆ
- 7 – ಸುರಂಗ ಮಾರ್ಗಗಳು: ಜಯನಗರ 5 ನೇ ಬ್ಲಾಕ್, ಬನ್ನೇರುಘಟ್ಟ 3 ಮತ್ತು 4 ನೇ ಹಂತ ಜೆ.ಪಿ.ನಗರ, ಹೊಸೂರು–ಬೇಗೂರು ಜಂಕ್ಷನ್, ಭಾಷ್ಯಂ ವೃತ್ತ – ಸದಾಶಿವನಗರ, ಶಿವಾನಂದ ವೃತ್ತ, ಫೌಂಟೇನ್ ವೃತ್ತ–ಓಕಳಿಪುರಂ, ರಾಣಿ ಚೆನ್ನಮ್ಮ ವೃತ್ತಗಳಲ್ಲಿ ಸುರಂಗ ಮಾರ್ಗಗಳನ್ನು ನಿರ್ಮಿಸಲಾಗುವುದು.
- 7 ಸಿಗ್ನಲ್ ಮುಕ್ತ ಕಾರಿಡಾರ್‌ಗಳು ವಿವಿಧ ಸ್ಥಳಗಳಲ್ಲಿ ನಿರ್ಮಿಸಲಾಗುವುದು.
- ಮಿಷನ್ ರಸ್ತೆ, ಬೇಗೂರು ರಸ್ತೆ, ಟ್ಯಾನರಿ ರಸ್ತೆ, ಬನ್ನೇರುಘಟ್ಟ ರಸ್ತೆ, ಹೆಣ್ಣೂರು ವರ್ತುಲ ರಸ್ತೆಯಿಂದ ಕಣ್ಣೂರು ವರ್ತುಲ ರಸ್ತೆ, ಅಬ್ಬಿಗೆರೆಯಿಂದ ಲಕ್ಷ್ಮೀಪುರ, ಚಿಕ್ಕಬಾಣಾವರದಿಂದ ಗಾಣಿಗರಹಳ್ಳಿ, ವಿದ್ಯಾರಣ್ಯಪುರ ರಸ್ತೆ, ಹಲಗೆವಡೇರಹಳ್ಳಿಯಿಂದ ಪಂತರಪಾಳ್ಯ, ತಿಂಡ್ಲು ರಸ್ತೆಗಳ ರಸ್ತೆ ಅಗಲೀಕರಣ ಕಾಮಗಾರಿಗಳು ಹಾಗೂ ಇತರೆ ರಸ್ತೆಗಳನ್ನು ಉತ್ತಮಗೊಳಿಸುವ ಕಾಮಗಾರಿಗಳಿಗೆ 2011–12ರ ಆಯವ್ಯಯದಲ್ಲಿ ರೂ.55.00 ಕೋಟಿಗಳನ್ನು ಕಾಯ್ದಿರಿಸಿದೆ.
- 'ಪಾಲಿಕೆ ಭವನ' ನಿರ್ಮಾಣಕ್ಕೆ 2011–12ರ ಆಯವ್ಯಯದಲ್ಲಿ ರೂ.2.00 ಕೋಟಿಗಳನ್ನು ಪ್ರಸ್ತಾಪಿಸಲಾಗಿದೆ
- 'ಮೆಜಸ್ಟಿಕ್' ಮತ್ತು ಸುತ್ತಮುತ್ತಲ ಪ್ರದೇಶಗಳ ಸೌಂದರ್ಯ ಹೆಚ್ಚಿಸಲು 2011–12ನೇ ಸಾಲಿನ ಆಯವ್ಯಯದಲ್ಲಿ ರೂ.3.00 ಕೋಟಿಗಳನ್ನು ಪ್ರಸ್ತಾಪಿಸಲಾಗಿದೆ
- ಆಸ್ಪತ್ರೆಗಳು, ಹೆರಿಗೆ ಆಸ್ಪತ್ರೆಗಳ ನಿರ್ಮಾಣಕ್ಕೆ ಆಯವ್ಯಯದಲ್ಲಿ ರೂ.36.15 ಕೋಟಿಗಳನ್ನು ಪ್ರಸ್ತಾಪಿಸಲಾಗಿದೆ
- ಶೈಕ್ಷಣಿಕ ಕಟ್ಟಡಗಳ ನಿರ್ಮಾಣಕ್ಕೆ ಆಯವ್ಯಯದಲ್ಲಿ ರೂ.13.92 ಕೋಟಿಗಳನ್ನು ಪ್ರಸ್ತಾಪಿಸಲಾಗಿದೆ

## 14. ಕೆರೆಗಳ ಅಭಿವೃದ್ಧಿ:

**"ಕರಗುತ್ತಿರುವ ಕೆರೆಗಳನ್ನು ಉಳಿಸೋಣ,**
**ನಶಿಸುತ್ತಿರುವ ಅಂತರ್ಜಲವನ್ನು ಹೆಚ್ಚಿಸೋಣ.........."**

ಕಳೆದ ಶತಮಾನದ ಮಧ್ಯಭಾಗದಲ್ಲಿ ಬೆಂಗಳೂರು ನಗರದಲ್ಲಿ ಒಟ್ಟು 262 ಕೆರೆಗಳಿದ್ದವು. ಕೊಳಗಳು ಮತ್ತು ಜೌಗು ಪ್ರದೇಶಗಳಿಂದಾಗಿ ನೆಲದಲ್ಲಿ ನೀರಿನ ಮಟ್ಟ ಬಹಳವಾಗಿರುತ್ತಿತ್ತು. ಜೊತೆಗೆ ನಗರದ ಹವಾಮಾನ ತಂಪಾಗಿರುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರಿನ ಅನೇಕ ಕೆರೆಗಳು ನಾಶವಾಗಿಹೋಗಿವೆ. ಇದಕ್ಕೆ ಕಾರಣ ಹಲವಾರು ಮಾನವ ಚಟುವಟಿಕೆಗಳು ಮತ್ತು ಜನಸಂಖ್ಯಾ ಸ್ಫೋಟ. ಇವುಗಳಿಂದಾಗಿ ನಗರೀಕರಣ ಮತ್ತು ನಗರ ವಿಸ್ತರಣೆಗೊಂಡಿರುತ್ತದೆ. ಉಳಿದ

ಕೆರೆಗಳು ಕೊಳಚೆ ಗುಂಡಿಗಳಾಗಿವೆ. ಔದ್ಯೋಗಿಕ ತ್ಯಾಜ್ಯಗಳನ್ನು, ಮನೆಗಳ ಕೊಳಚೆಯನ್ನು ಮತ್ತು ಘನತ್ಯಾಜ್ಯಗಳನ್ನು ನೇರವಾಗಿ ಕೆರೆಗಳಿಗೆ ಹರಿಯಬಿಡಲಾಗುತ್ತಿದೆ. ಭೂ ಮೌಲ್ಯದಿಂದಾಗಿ ಅನೇಕ ಕೆರೆಗಳ ಒತ್ತುವರಿಯಾಗಿದೆ. ಇದರಿಂದ ನಗರದಲ್ಲಿ ನೀರಿನ ಆಸರೆಗಳು ಬತ್ತಿಹೋಗುತ್ತಿವೆ. ಅಭಿವೃದ್ಧಿಯ ಹೆಸರಿನಲ್ಲಿ ಈಗಾಗಲೇ ಅನೇಕ ಕೆರೆಗಳನ್ನು ಇತರೇ ಉದ್ದೇಶಗಳಿಗಾಗಿ ಬಳಸಲಾಗಿದೆ. ತೀವ್ರ ಔದ್ಯೋಗೀಕರಣ ಮತ್ತು ನಗರೀಕರಣ ಗಳಿಂದಾಗಿ ಬೆಂಗಳೂರಿನ ಕೆರೆಗಳ ಸಂಖ್ಯೆ 262 ರಿಂದ 127 ಕ್ಕೆ ಕುಸಿದಿದೆ.

'ಒಂದು ಸ್ಥಳದ ಸೌಂದರ್ಯ ಅತೀ ಹೆಚ್ಚು ಆಕರ್ಶಿಸುವುದು ಅಲ್ಲಿನ ಕೆರೆಗಳಿಂದ. ಕೆರೆ ಭೂಮಿಯ ಕಣ್ಣು; ಅದರಲ್ಲಿ ಇಣುಕಿ ನೋಡಿದರೆ ತನ್ನದೇ ಪ್ರಕೃತಿಯ ಆಳವನ್ನು ತಾನೇ ಕಾಣಬಹುದು.' ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಲಿ ಇರುವ ಕೆರೆಗಳ ಪುನರುಜ್ಜೀವನಕ್ಕೆ ಬದ್ಧವಾಗಿದೆ. ಕೆರೆಗಳ ಅಭಿವೃದ್ಧಿಗೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ **ರೂ.121.00 ಕೋಟಿ**ಗಳನ್ನು ಪ್ರಸ್ತಾಪಿಸಲಾಗಿದೆ.

### 15. ಮಳೆನೀರು ಚರಂಡಿಗಳ ನವೀಕರಣ:

ಕಳೆದ ಹಲವು ವರ್ಷಗಳಿಂದ ಬೆಂಗಳೂರು ನಗರ ಹಾಗೂ ಅದರ ಸುತ್ತಮುತ್ತಲಿನ ಹಲವಾರು ಪ್ರದೇಶಗಳು ಮಳೆಗಾಲದಲ್ಲಿ ತೀವ್ರವಾದ ಮಳೆ ನೀರಿನ ಪ್ರವಾಹದ ಸಮಸ್ಯೆಯನ್ನು ಎದುರಿಸುತ್ತಿವೆ. ಇದು, ಹಲವಾರು ಸ್ಥಳಗಳಲ್ಲಿನ ತಗ್ಗುಪ್ರದೇಶಗಳು, ಪಾದಚಾರಿ ರಸ್ತೆಗಳ ಮುಳುಗಡೆಗೆ ಕಾರಣವಾಗಿ, ಕಾಲ್ನಡಿಗೆಯಲ್ಲಿ ಚಲಿಸುವವರಿಗೆ ತೊಂದರೆಯುಂಟು ಮಾಡಿದೆಯಲ್ಲದೆ, ಗಂಟೆಗಟ್ಟಳೆ ಸಂಚಾರ ತಡೆಗೂ ಕಾರಣವಾಗಿ ಅಪಾರ ಜೀವ ಮತ್ತು ಆಸ್ತಿಗಳ ನಷ್ಟಕ್ಕೂ ಕಾರಣವಾಗಿದೆ. ಕಳೆದ ಐದು ದಶಕಗಳಲ್ಲಿ ಬೆಂಗಳೂರಿನಲ್ಲಿ ಜನಸಂಖ್ಯೆ ಸ್ಫೋಟಕ ಪ್ರಮಾಣದಲ್ಲಿ ಬೆಳೆದಿದ್ದು ತೀವ್ರಗತಿಯ ನಗರೀಕರಣ ಹಲವಾರು ಕಾರಣಗಳಲ್ಲಿ ಮುಖ್ಯವಾದವುಗಳು. ಪರಿಣಾಮವಾಗಿ ಈಗಾಗಲೇ ಮೂಲಭೂತ ಸೌಕರ್ಯಗಳ ಒತ್ತಡದ ಭಾರದಿಂದ' ಕುಗ್ಗಿರುವ ನಗರದ ಮೇಲೆ ಇದು ಇನ್ನಷ್ಟು ಭಾರ ಹೇರಿದೆ.

"ಮಳೆ ನಮ್ಮ ಜೀವನದ ವೃದ್ಧಿಗೆ ಕಾರಣವಾಗುವವರೆಗೆ ನಾವು ಮುಂದುವರಿದ ನಾಗರಿಕ ಜನತೆಯಾಗುವುದು ಸಾಧ್ಯವಿಲ್ಲ." ಕಾಲುವೆಗಳ ಕಾರ್ಯಕ್ಷಮತೆಯನ್ನು ಸುಧಾರಿಸುವ ಹಾಗೂ ಸಾಮಾನ್ಯ ಜನತೆಯ ಸುರಕ್ಷತೆಯ ಅಂಶಗಳನ್ನು ಸುಧಾರಿಸಿ, ಮಳೆಗಾಲದಲ್ಲಿ ನಗರವು ಎದುರಿಸುವ ಪ್ರವಾಹ ಸಂಬಂಧಿ ಸಮಸ್ಯೆಗಳನ್ನು ಕಡಿಮೆಗೊಳಿಸುವ ಉದ್ದೇಶದಿಂದ, ಪಾಲಿಕೆಯು ಈಗಿರುವ ಮಳೆನೀರು ಚರಂಡಿಗಳನ್ನು ನವೀನ ಮಾದರಿಗಳಲ್ಲಿ ವಿನ್ಯಾಸಗೊಳಿಸಲು ಯೋಜಿಸಿದ್ದು, ಇದು ಈಗಿರುವ ವ್ಯವಸ್ಥೆಯ ಸಾಮರ್ಥ್ಯ, ಹೂಳು ತೆಗೆಯುವಿಕೆ, ಸರಪಳಿ ಸಂಪರ್ಕ ಬೇಲಿ, ತಡೆಗೋಡೆಗಳ ನಿರ್ಮಾಣ, ಡೆಕ್ ಸ್ಲ್ಯಾಬ್ ಮುಚ್ಚಳ ಇತ್ಯಾದಿಗಳನ್ನು ಸುಧಾರಿಸುವುದನ್ನು ಒಳಗೊಂಡಿರುತ್ತದೆ.

2011–12ನೆ ಸಾಲಿನಲ್ಲಿ **ರೂ.419.63 ಕೋಟಿ**ಗಳ ಈ ಕೆಳಕಂಡ ಬೃಹತ್ ಯೋಜನೆ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ.

- 4 ಪ್ರಧಾನ ಕಣಿವೆಗಳಿಗಾಗಿ ಜೆಎನ್‌ಎನ್‌ಯುಆರ್‌ಎಂ ಯೋಜನೆಯಡಿ ರೂ 187.18 ಕೋಟಿ
- ರಾಜ್ಯ ಸರ್ಕಾರದ ನಗರೋತ್ಥಾನ ಯೋಜನೆಯಡಿ ರೂ.80.00 ಕೋಟಿ
- ಹೊಸದಾಗಿ ಸೇರ್ಪಡೆಗೊಂಡ ಸ್ಥಳೀಯ ಸಂಸ್ಥೆಗಳ ಪ್ರದೇಶಗಳಲ್ಲಿನ ಮಳೆ ನೀರು ಚರಂಡಿಗಳ ಪುನರ್ ನವೀಕರಣಕ್ಕಾಗಿ ರೂ.25.00 ಕೋಟಿ
- ಹೂಳುತೆಗೆಯುವ ಕೆಲಸಕ್ಕಾಗಿ ರೂ.47.26 ಕೋಟಿ
- ಚರಂಡಿಗಳ ಹೊದಿಕೆ ಕಾಮಗಾರಿಗೆ ರೂ.19.19 ಕೋಟಿ
- ಬಾಕಿ ಉಳಿದಿರುವ ಚರಂಡಿ ಕಾಮಗಾರಿಗಳ ಸುಧಾರಣೆಗಾಗಿ ರೂ.51.15 ಕೋಟಿ

ಇಡೀ ವ್ಯವಸ್ಥೆಯನ್ನು ನವೀಕರಣಗೊಳಿಸುವ ಮೂಲಕ ಮಳೆನೀರು ಚರಂಡಿ ಕಾಮಗಾರಿ ವಿಭಾಗವನ್ನು ಬಲಪಡಿಸಲಾಗುತ್ತದೆ. ಅಧೀಕ್ಷಕ ಅಭಿಯಂತರರ ಮೇಲುಸ್ತುವಾರಿಯಲ್ಲಿ ಪ್ರತಿ ಕಣಿವೆಯ ಮುಖ್ಯಸ್ಥರಾಗಿ, ಭೂ ಸ್ವಾಧೀನಪಡಿಸಿಕೊಳ್ಳುವಿಕೆಯೂ ಒಳಗೊಂಡಂತೆ, ಆ ಕಣಿವೆಗೆ ಸಂಬಂಧಿಸಿದಂತೆ, ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಪ್ರತಿಯೊಂದು ಕಣಿವೆಯ ರೂಪುರೇಷೆಯನ್ನು ಕ್ರಮವಾಗಿ ತಯಾರಿಸಿ ದಾಖಲಿಸಲಾಗುತ್ತದೆ.

## 16. ವೃಕ್ಷ ಉದ್ಯಾನಗಳು:

'ನೀವು ಸಸಿ ನೆಡಬೇಕೆಂದಿದ್ದಾಗ, ಎಂದಿಗೂ ಒಂದನ್ನೇ ನೆಡಬೇಡಿ. ಮೂರನ್ನು ನೆಡಿ – ಅಂದಕ್ಕೊಂದು, ನೆರಳಿಗೊಂದು ಹಾಗೂ ಹಣ್ಣಿಗೊಂದು' ಹೀಗೆನ್ನುತ್ತದೆ ಆಫ್ರಿಕಾದ ಒಂದು ಗಾದೆ. ಮರಗಳೇ ನಮ್ಮ ಅತ್ಯುತ್ತಮ ಪುರಾತನ ಕಲಾಕೃತಿಗಳು. ಪಾಲಿಕೆಯು ಬೆಂಗಳೂರಿನ ಆಯ್ದ ಸೂಕ್ತ ಸ್ಥಳಗಳಲ್ಲಿ ವೃಕ್ಷ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಬೇಕೆಂಬ ಉದ್ದೇಶ ಹೊಂದಿದೆ. ಈ ಉದ್ಯಾನಗಳಲ್ಲಿ ವೃಕ್ಷಗಳನ್ನು ಬೆಳೆಸಲು ಒತ್ತು ನೀಡಲಾಗುವುದು. ಇನ್ನು ಮುಂದೆ ಉದ್ಯಾನಗಳಲ್ಲಿ ಮೆಕ್ಸಿಕನ್ ಹುಲ್ಲು, ವಿಲಕ್ಷಣ ಸಸ್ಯಗಳು, ಕಾರಂಜಿಗಳು ವಿರಳವಾಗಿರುತ್ತವೆ. ವೃಕ್ಷ ಉದ್ಯಾನಗಳನ್ನು ಅಭಿವೃದ್ಧಿಪಡಿಸಲು 2011–12ರಲ್ಲಿ ರೂ.10.00 ಕೋಟಿಗಳನ್ನು ಪ್ರಸ್ತಾಪಿಸಲಾಗಿದೆ.

## 17. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕ್ರೀಡಾ ಚೇತನಾ – ಮರಳಿ ಬನ್ನಿ ಆಟದ ಮೈದಾನಕ್ಕೆ :

**'ಚಾಂಪಿಯನ್ನರು ತಯಾರಾಗುವುದು ಜಿಮ್‌ಗಳಲ್ಲಿ ಅಲ್ಲ, ಅವರ ಆತ್ಮ ವಿಶ್ವಾಸದಿಂದ, ಬಯಕೆ, ಕನಸು, ಮತ್ತು ಕಲ್ಪನೆಗಳಿಂದ.'** ಅಂತಹ ಕನಸುಗಳು, ಬಯಕೆಗಳು, ಆಕಾಂಕ್ಷೆಗಳನ್ನು ಸಾಕಾರಗೊಳಿಸಲು ಪಾಲಿಕೆಯು **'ಮರಳಿ ಬನ್ನಿ ಆಟದ ಮೈದಾನಕ್ಕೆ'** ಕಾರ್ಯಕ್ರಮವನ್ನು ಆರಂಭಿಸುತ್ತಿದೆ. ದೂರದರ್ಶನ,

ವೀಡಿಯೊ ಆಟಗಳಿಗೆ ಅಂಟಿಕೊಂಡಿರುವ ಮಕ್ಕಳನ್ನು ಕ್ರೀಡೆಗಳತ್ತ ಆಕರ್ಷಿಸುವುದೇ ಈ ಕಾರ್ಯಕ್ರಮದ ಉದ್ದೇಶ. ಮಕ್ಕಳಿಗಾಗಿ ಆಟದ ಮೈದಾನಗಳನ್ನು ಅಭಿವೃದ್ಧಿಪಡಿಸುವ ಉದ್ದೇಶವಿದೆ. ಬ್ಯಾಸ್ಕೆಟ್ ಬಾಲ್, ಕ್ರಿಕೆಟ್, ಹಾಕಿ ಮತ್ತು ಫುಟ್ ಬಾಲ್ ಜೊತೆಗೆ ಕಬಡ್ಡಿ, ಖೊ-ಖೊ, ಮತ್ತು ಅಟ್ಯಾ-ಪಟ್ಯಾಗಳಂತಹ ಸಾಂಪ್ರದಾಯಿಕ ಕ್ರೀಡೆಗಳನ್ನು ಉತ್ತೇಜಿಸಲಾಗುತ್ತದೆ.

ಕ್ರೀಡಾ ತರಬೇತುದಾರರನ್ನು ಗೌರವಧನದ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ. 5 ಹೊಸ ಆಟದ ಮೈದಾನಗಳನ್ನು ಹೊರವಲಯದ ವರ್ತುಲ ರಸ್ತೆಗೆ ಹೊಂದಿಕೊಂಡಂತೆ ನಿರ್ಮಿಸಲಾಗುವುದು. ತರಬೇತಿ ಕಾರ್ಯಕ್ರಮಗಳಿಗಾಗಿ ಪಾಲಿಕೆಯು ಹೆಸರಾಂತ ಸಂಸ್ಥೆಗಳಾದ ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ, ಕರ್ನಾಟಕ ಅಥ್ಲೆಟಿಕ್ ಅಸೋಸಿಯೇಷನ್, ಕರ್ನಾಟಕ ವಾಲಿಬಾಲ್ ಅಸೋಸಿಯೇಷನ್, ಲಾನ್ ಟೆನಿಸ್ ಅಸೋಸಿಯೇಷನ್, ಇತ್ಯಾದಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಿದೆ.

ಕ್ರೀಡಾಂಗಣಗಳ ನಿರ್ಮಾಣ, ಆಟದ ಮೈದಾನ ಮತ್ತಿತರ ಕ್ರೀಡಾ ಉತ್ತೇಜನಕಾರಿ ಚಟುವಟಿಕೆಗಳಿಗಾಗಿ **ರೂ.81.53 ಕೋಟಿ**ಗಳನ್ನು ಪ್ರಸ್ತಾಪಿಸಲಾಗಿದೆ.

## 18. ಜೆ ಎನ್ ಎನ್ ಯು ಆರ್ ಎಮ್ ಅಭಿಯಾನ:

**ಈ ಅಭಿಯಾನದಡಿಯಲ್ಲಿ ಒಟ್ಟು 1259.29 ಕೋಟಿ** ರೂಪಾಯಿಗಳ ಮೌಲ್ಯದ 17 ಯೋಜನೆಗಳನ್ನು ಕೇಂದ್ರ ಸರ್ಕಾರವು ಅನುಮೋದಿಸಿದೆ. ಇದರಲ್ಲಿ ಕೇಂದ್ರ ಸರ್ಕಾರದ ಕೊಡುಗೆ ರೂ.**342.92 ಕೋಟಿ** ಆದರೆ, ರಾಜ್ಯ ಸರ್ಕಾರದ ಕೊಡುಗೆ ರೂ.**161.68** ಕೋಟಿ ಆಗಿರುತ್ತದೆ. ಉಳಿದ ಮೊತ್ತವನ್ನು ಪಾಲಿಕೆಯು ಭರಿಸಬೇಕಾಗುತ್ತದೆ. ಕೇಂದ್ರ ಸರ್ಕಾರವು ಇದುವರೆಗೂ ತನ್ನ ಪಾಲಿನ ರೂ.**237.59 ಕೋಟಿ** ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರೆ, ರಾಜ್ಯ ಸರ್ಕಾರವು ರೂ.**107.53 ಕೋಟಿ** ರೂಪಾಯಿಗಳನ್ನು ಬಿಡುಗಡೆ ಮಾಡಿದೆ. 6 ಯೋಜನೆಗಳು ಈಗಾಗಲೇ ಪೂರ್ಣಗೊಂಡಿದ್ದು, ಸಾರ್ವಜನಿಕರಿಗೆ ತೆರವಾಗಿವೆ. ಉಳಿದ ಯೋಜನೆಗಳನ್ನು ವೇಳಾಪಟ್ಟಿಯ ಪ್ರಕಾರ ಪೂರ್ಣಗೊಳಿಸಲಾಗುತ್ತದೆ. ಈಗಾಗಲೇ ಈ ಯೋಜನೆಗಾಗಿ ರೂ.**675.58 ಕೋಟಿ** ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಈ ಯೋಜನೆಗಳನ್ನು ನಿಗದಿತ ಅವಧಿಯೊಳಗೆ ಮುಗಿಸಲು ಸೂಕ್ತ ಕ್ರಮಕೈಗೊಳ್ಳಲಾಗುವುದು.

**19.** ಪಾಲಿಕೆಯು ಸಸ್ಯ ಸಂಕುಲದ ನಿಖರವಾದ ಹಾಗೂ ವೈಜ್ಞಾನಿಕ ಮಾಹಿತಿಯನ್ನು ಪಡೆದುಕೊಳ್ಳಲು **ವೃಕ್ಷಪಟ (ಟ್ರೀ ಮ್ಯಾಪಿಂಗ್)** ತಯಾರಿಸಲು ಯೋಜಿಸಲಾಗಿದೆ.

**20.** 2011-12ನೇ ಸಾಲಿನಲ್ಲಿ ಬೃಹತ್ ಪ್ರಮಾಣದಲ್ಲಿ ಮರ ನೆಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. **6.00 ಲಕ್ಷ** ಸಸಿಗಳನ್ನು ನೆಡುವ ಯೋಜನೆಯಿದೆ. ಸ್ವಯಂ ಸೇವಾ ಸಂಸ್ಥೆಗಳು, ಶಾಲೆಗಳು, ಕಾಲೇಜುಗಳು, ಹಾಗೂ ಸಾರ್ವಜನಿಕ ಸಂಸ್ಥೆಗಳ ಸೇವೆಯನ್ನು ಬೃಹತ್ ಪ್ರಮಾಣದಲ್ಲಿ ಇದಕ್ಕಾಗಿ ಉಪಯೋಗಿಸಿಕೊಳ್ಳಲಾಗುತ್ತದೆ.

**21. ಟಿ.ಡಿ.ಆರ್ ಬ್ಯಾಂಕ್** ಸ್ಥಾಪಿಸುವ ಯೋಜನೆಯನ್ನು ಹೊಂದಿದ್ದು, ಟಿಡಿಆರ್‌ಗಳನ್ನು ಖರೀದಿಸುವ ಮತ್ತು ಮಾರುವ ಹಕ್ಕು ಕೇವಲ ಪಾಲಿಕೆಗೆ ಇರುವ ಹಾಗೆ ಯೋಜಿಸಲಾಗಿದೆ.

**22.** ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಪಾರ ಕಾರ್ಯಪಡೆಯ ತಾಂತ್ರಿಕ **ಅಂಶಗಳು/ಅಭಿವೃದ್ಧಿಗಳನ್ನು ನವೀಕರಿಸುವ ಸಲುವಾಗಿ ಪಾಲಿಕೆಯಲ್ಲಿ ಸುಸಜ್ಜಿತವಾದ ತಾಂತ್ರಿಕ ಗ್ರಂಥಾಲಯವೊಂದನ್ನು** ಸ್ಥಾಪಿಸುವ ಯೋಜನೆಯಿದೆ.

**23.** ಶಾಲೆ, ಕಾಲೇಜು, ಆಸ್ಪತ್ರೆಗಳ ಕಟ್ಟಡಗಳು ಹಾಗೂ ರುದ್ರಭೂಮಿಗಳ ನಿರ್ವಹಣೆಗಾಗಿ **"ಪಾಲಿಕೆ ಆಸ್ತಿ ನಿರ್ವಹಣೆ ಕೋಶ" (BBMP ASSETS MANAGEMENT CELL) ವನ್ನು** ಸ್ಥಾಪಿಸುವ ಯೋಜನೆಯಿದೆ.

**24.** ಬೆಂಗಳೂರನ್ನು ಹೊಂಡ ಮುಕ್ತ **(POT HOLE FREE)** ನಗರವನ್ನಾಗಿ ಮಾಡಲು, ಪ್ರತಿಯೊಂದು ವಲಯಕ್ಕಾಗಿ **ಜಿಐಎಸ್ ಚಾಲಿತ ಹೊಂಡಭರ್ತಿ ಯಂತ್ರ**ವನ್ನು ಖರೀದಿಸಲು ಉದ್ದೇಶಿಸಲಾಗಿದೆ.

**25. ಹಳೆಯ ಪ್ರದೇಶಗಳನ್ನು ನವೀಕರಿಸಲು ಯೋಜಿಸಲಾಗಿದೆ.**

**26.** ರೂ.**1.50 ಕೋಟಿಗಳ** ವೆಚ್ಚದಲ್ಲಿ ಯಡಿಯೂರು ಕೆರೆಯ ಬಳಿ, ಯುವಕರ ಆರಾಧ್ಯದೈವ **ಶ್ರೀ ವಿವೇಕಾನಂದರ ಪ್ರತಿಮೆಯನ್ನು** ಸ್ಥಾಪಿಸಲಾಗುತ್ತದೆ.

**27.** ಪರಿಸರ ಸ್ನೇಹಿ ಯೋಜನೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ 2 ಸ್ಥಳಗಳಲ್ಲಿ ಆರಂಭಿಕ ಯೋಜನೆಯಾಗಿ **ಸೈಕಲ್ ಟ್ರ್ಯಾಕ್**ಗಳನ್ನು ಪ್ರಾರಂಭಿಸಲಾಗುತ್ತದೆ

**28.** ಪಾಲಿಕೆಯ ಕಾಮಗಾರಿಗಳನ್ನು ಉತ್ತಮ ಗುಣಮಟ್ಟದಲ್ಲಿರಿಸುವ ಸಲುವಾಗಿ ಎಲ್ಲಾ 8 ವಲಯಗಳಲ್ಲೂ **ಗುಣಮಟ್ಟ ನಿಯಂತ್ರಣ ಪರೀಕ್ಷಾ ಪ್ರಯೋಗಾಲಯ ಗಳನ್ನು** ಸ್ಥಾಪಿಸಲಾಗುತ್ತದೆ.

**29.** ಕಾಮಗಾರಿ ಸ್ಥಳಗಳಲ್ಲಿ ಬಳಸಲ್ಪಡುವ ವಸ್ತುಗಳ ಗುಣಮಟ್ಟವನ್ನು ಸ್ಥಳದಲ್ಲೇ ಪರೀಕ್ಷಿಸಲು, **ಸಂಚಾರಿ ಗುಣಮಟ್ಟ ನಿಯಂತ್ರಣಾ ಪ್ರಯೋಗಾಲಯಗಳನ್ನು ಒದಗಿಸಲಾಗುವುದು.**

**30.** ಪಾಲಿಕೆಯಲ್ಲಿ ಆರ್ಥಿಕ ಶಿಸ್ತನ್ನು ಹೊಂದುವ ಸಲುವಾಗಿ ರೂ.**20.00 ಲಕ್ಷ ರೂಪಾಯಿಗೆ** ಮೇಲ್ಪಟ್ಟ ಎಲ್ಲಾ ರೀತಿಯ ಕಾಮಗಾರಿ ಅಂದಾಜು ಪಟ್ಟಿಗಳ ಪೂರ್ವ ಲೆಕ್ಕಪರಿಶೋಧನೆ ಕೈಗೊಳ್ಳಲಾಗುವುದು.

**31.** ಆಡಳಿತಾತ್ಮಕ ಉದ್ದೇಶಗಳಿಗಾಗಿ, **ವಲಯಗಳನ್ನು ವೈಜ್ಞಾನಿಕ** ಆಧಾರದ ಮೇಲೆ ಪುನರ್‌ವ್ಯವಸ್ಥಗೊಳಿಸಲಾಗುತ್ತದೆ. ಪರಿಣಾಮಕಾರಿ ಕಾರ್ಯಕ್ಷಮತೆಗಾಗಿ, ವಲಯಗಳನ್ನು ಪುನರ್ ರಚಿಸಿ ಅಧಿಕಾರಗಳನ್ನು ಮರುನಿಯೋಜಿಸಲಾಗುತ್ತದೆ.

**32.** ಆಧುನಿಕ ಉಡುಪು ತಯಾರಿಕಾ **ತರಬೇತಿ ಸಂಸ್ಥೆಯನ್ನು** ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಪಾಲಿಕೆ ವತಿಯಿಂದ ಹಂತಹಂತವಾಗಿ ಸ್ಥಾಪಿಸಲಾಗುವುದು.

**33. ರುದ್ರಭೂಮಿಗಳಿಗೆ** ಬೇಲಿ ಹಾಕುವ ಮೂಲಕ, ಮರಗಳನ್ನು ನೆಡುವ ಮೂಲಕ, ಪಾದಚಾರಿ ಮಾರ್ಗಗಳನ್ನು ನಿರ್ಮಿಸುವ ಮೂಲಕ ಅಭಿವೃದ್ಧಿ ಪಡಿಸಲಾಗುತ್ತದೆ.

**34. ಸಂಪನ್ಮೂಲ ಕ್ರೂಡೀಕರಣದಲ್ಲಿ ಸುಧಾರಣೆಗಳು:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಣಕಾಸು ಶಿಸ್ತನ್ನು ತರುವ ಸಲುವಾಗಿ ಪ್ರಸ್ತುತ ವರ್ಷದಿಂದ ನಾವು ಹಲವಾರು ಯೋಜನೆಗಳನ್ನು ಆಯೋಜಿಸಿದ್ದೇವೆ. ಅನೇಕ ವೆಚ್ಚ ಕಡಿತ ಯೋಜನೆಗಳನ್ನು ಕೈಗೊಳ್ಳಲಾಗುತ್ತದೆ. ಸಂಪನ್ಮೂಲ ಕ್ರೋಢೀಕರಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕೈಗೊಂಡ ಅತ್ಯುತ್ತಮ ಆರ್ಥಿಕ ನಿರ್ವಹಣೆಗೆ **"ನಗರ ರತ್ನ"** ಪುರಸ್ಕಾರವನ್ನು All India Institute of Local Self Governance ಸಂಸ್ಥೆಯು ನೀಡಿರುವುದನ್ನು ಸ್ಮರಿಸಲಾಗಿದೆ.

2011–12ರ ಆಯವ್ಯಯ ಪತ್ರದಲ್ಲಿ ಕೆಳಕಂಡ ಹೊಸ ತೆರಿಗೆಗಳನ್ನು ಪ್ರಸ್ತಾಪಿಸಲಾಗಿದೆ.

**1. ಆಸ್ತಿ ತೆರಿಗೆ:**

ಸುಮಾರು 10,000 ಸಂಖ್ಯೆಯಲ್ಲಿರುವ ಸೇವಾ ಅಪಾರ್ಟ್‌ಮೆಂಟ್‌ಗಳು ವಸತಿ ದರದಲ್ಲಿ ತೆರಿಗೆ ಪಾವತಿಸುತ್ತಿವೆ. ಅವುಗಳು ವಾಣಿಜ್ಯ ಚಟುವಟಿಕೆ ನಡೆಸುತ್ತಿರುವುದರಿಂದ ಅವುಗಳನ್ನು ವಾಣಿಜ್ಯ ದರದಲ್ಲಿ ಆಸ್ತಿ ತೆರಿಗೆಗಾಗಿ ಪರಿಗಣಿಸಲಾಗುತ್ತದೆ. ಈ ಆಸ್ತಿ ತೆರಿಗೆ ಸಾಮಾನ್ಯ ಆಸ್ತಿ ತೆರಿಗೆಗಿಂತ 1.5 ಪಟ್ಟು ಹೆಚ್ಚಾಗಿರುತ್ತದೆ. 2011–12ನೇ ಸಾಲಿನಲ್ಲಿ ರೂ.50.00 ಕೋಟಿ ಸಂಗ್ರಹಿಸುವ ನಿರೀಕ್ಷೆಯಿದೆ.

**2. ಖಾಲಿ ನಿವೇಶನ ಶುಚಿಗೊಳಿಸುವ ಶುಲ್ಕ:**

ಬೆಂಗಳೂರಿನಲ್ಲಿ ಶೇ.20 ರಷ್ಟು ಆಸ್ತಿಗಳು ಖಾಲಿ ನಿವೇಶನಗಳೆಂದು ಅಂದಾಜಿಸಲಾಗಿದೆ. ಖಾಲಿ ನಿವೇಶನಗಳ ಮಾಲೀಕರು ತಮ್ಮ ನಿವೇಶನಗಳನ್ನು ಶುಚಿಯಾಗಿರಿಸಲು ಮತ್ತು ಪೊದೆಮುಕ್ತವಾಗಿರಿಸಲು ಯಾವ ಆಸಕ್ತಿಯನ್ನೂ ತೋರಿಸುತ್ತಿಲ್ಲ. ದೊಡ್ಡದೊಡ್ಡ ಮರಗಳೂ ಕೂಡ ಬೆಳೆದು ಇದು ಅಕ್ಕಪಕ್ಕದವರಿಗೆ ತೊಂದರೆಯಂಟು ಮಾಡುತ್ತಿದೆ. ಖಾಲಿ ನಿವೇಶನಗಳನ್ನು ಶುಚಿಯಾಗಿರಿಸುವ ಸಲುವಾಗಿ ಪಾಲಿಕೆಯು ಕ್ರಮ ಕೈಗೊಳ್ಳುತ್ತಿದೆ. ಖಾಲಿ ನಿವೇಶನವು ಶುಚಿಯಾಗಿಲ್ಲದಿದ್ದಲ್ಲಿ, ಆಸ್ತಿ ತೆರಿಗೆ ಮೊತ್ತದ 3 ಪಟ್ಟು ಹಣವನ್ನು ಶುಚಿಗೊಳಿಸುವ ಶುಲ್ಕವಾಗಿ ಸಂಗ್ರಹಿಸಲು ಯೋಜಿಸಲಾಗಿದೆ. ದಂಡ ಪಾವತಿಸಲು ಮಾಲೀಕರು ವಿಫಲರಾದಲ್ಲಿ, ಕೆ.ಎಂ.ಸಿ ಕಾಯಿದೆ ಅನ್ವಯ ಕ್ರಮಕೈಗೊಳ್ಳಲಾಗುತ್ತದೆ. 2011–12ನೇ ಸಾಲಿನಲ್ಲಿ ರೂ.50.00 ಕೋಟಿ ಸಂಗ್ರಹಿಸುವ ನಿರೀಕ್ಷೆಯಿದೆ.

### 3. ಘನತ್ಯಾಜ್ಯ ವಸ್ತು ನಿರ್ವಹಣೆ ಶುಲ್ಕ:

ಅಪಾರ ಪ್ರಮಾಣದ ಘನತ್ಯಾಜ್ಯವನ್ನು ಮುಖ್ಯವಾಗಿ ಕಲ್ಯಾಣ ಮಂಟಪಗಳು ಹಾಗೂ ಹೋಟೆಲುಗಳಿಂದ ಉತ್ಪತ್ತಿಯಾಗುತ್ತಿದೆ. ಆದ್ದರಿಂದ ವಿಲೇವಾರಿಯ ವಾಸ್ತವಿಕ ವೆಚ್ಚದ ಆಧಾರದ ಮೇಲೆ, ಕಲ್ಯಾಣ ಮಂಟಪಗಳು ಹಾಗೂ ಹೋಟೆಲುಗಳಿಗೆ ಘನತ್ಯಾಜ್ಯ ನಿರ್ವಹಣಾ ಶುಲ್ಕವನ್ನು ವಿಧಿಸಲು ಪಾಲಿಕೆಯು ಯೋಜಿಸಿದೆ. 2011–12ನೇ ಸಾಲಿನಲ್ಲಿ ರೂ.25.00 ಕೋಟಿ ರೂಪಾಯಿ ಸಂಗ್ರಹಿಸುವ ನಿರೀಕ್ಷೆಯಿದೆ.


### 35. ಪರಿಷ್ಕೃತ ಅಂದಾಜುಗಳು 2010–11


2010–11ನೇ ಸಾಲಿನ ಆಯವ್ಯಯದ ಅಂದಾಜುಗಳ ಪ್ರಕಾರ, ಒಟ್ಟು ಸ್ವೀಕೃತಿಗಳು ರೂ.8446.75 ಕೋಟಿಗಳೆಂದು ಅಂದಾಜಿಸಲಾಗಿದ್ದು ಪರಿಷ್ಕೃತ ಅಂದಾಜುಗಳ ಪ್ರಕಾರ ಒಟ್ಟು ಸ್ವೀಕೃತಿಗಳು ರೂ.3517.29 ಕೋಟಿಗಳಾಗಿರುತ್ತದೆ. 2010–11ನೇ ಸಾಲಿನ ಆಯವ್ಯಯ ಅಂದಾಜುಗಳ ಪ್ರಕಾರ, ಒಟ್ಟು ವೆಚ್ಚಗಳು ರೂ.8861.04 ಕೋಟಿಗಳಾಗಿದ್ದು ಪರಿಷ್ಕೃತ ಅಂದಾಜುಗಳ ಪ್ರಕಾರ, ಒಟ್ಟು ವೆಚ್ಚಗಳು ರೂ.3856.76 ಕೋಟಿಗಳಾಗಿರುತ್ತದೆ.


### 36. ಆಯವ್ಯಯ ಅಂದಾಜು 2011–12

2011–12ನೇ ಸಾಲಿಗಾಗಿ ಒಟ್ಟು ಸ್ವೀಕೃತಿಗಳು ರೂ.9112.30 ಕೋಟಿಗಳೆಂದು ಅಂದಾಜಿಸಲಾಗಿದೆ. ರೂ.1650.00 ಕೋಟಿ ತೆರಿಗೆ ಆದಾಯ, ರೂ.3180.00 ಕೋಟಿ ತೆರಿಗೆಯೇತರ ಆದಾಯ ಹಾಗೂ ರೂ.2377.20 ಕೋಟಿ ಸರ್ಕಾರಿ ಅನುದಾನ ಮತ್ತು ಇತರೆ ಸ್ವೀಕೃತಿಗಳನ್ನು ಒಳಗೊಂಡಿದೆ. ಒಟ್ಟು ವೆಚ್ಚ ರೂ.9196.09 ಕೋಟಿಗಳಾಗಿದ್ದು, ರಾಜಸ್ವ ವೆಚ್ಚ ರೂ.2504.79 ಕೋಟಿ ಹಾಗೂ ಬಂಡವಾಳ ವೆಚ್ಚ ರೂ.6691.30 ಕೋಟಿಗಳನ್ನು ಒಳಗೊಂಡಿದೆ.

2011–12ನೆ ಸಾಲಿಗೆ ಒಟ್ಟಾರೆ ಹೆಚ್ಚುವರಿ ರೂ.1.46 ಕೋಟಿಗಳೆಂದು ಅಂದಾಜಿಸಲಾಗಿದೆ.




Non Tax Receipts
35 paise
Grants
24 paise
Tax Receipts
18 paise
Loans
12 paise
Deposits, Cesses, Statuatory Deductions
09 paise
Jnnurm
02 paise
HOW THE RUPEE COMES
WHERE THE RUPEE GOES
RUPEE
2011
M.S.S
Capital Works
66 paise
13 paise
Current asset & Liability
06 paise
Welfare
05 paise
Maintenance
04 paise
Salary
03 paise
Jnnurm Works
02 paise
Health & Education
01 paise
Administrative Expenses





**37. ಸಂಪನ್ಮೂಲ ಸಂಗ್ರಹಣೆ:**

ಮೇಲೆ ತಿಳಿಸಲಾದ ಯೋಜನೆಗಳ ಫಲವಾಗಿ, ಮತ್ತು ತೆರಿಗೆ ಸಂಗ್ರಹಣೆಯ ಕಾರ್ಯಾಚರಣೆಗಾಗಿ ರೂ.5595.01 ಕೋಟಿಗಳ ಹೆಚ್ಚುವರಿ ಸಂಪನ್ಮೂಲಗಳ ಅಗತ್ಯವಿರುತ್ತದೆ. 2011–12ನೇ ಸಾಲಿನಲ್ಲಿ ಪಾಲಿಕೆಯ ಒಟ್ಟು ತೆರಿಗೆ ಸ್ವೀಕೃತಿ ರೂ.1650.00 ಕೋಟಿಗಳೆಂದು ಅಂದಾಜಿಸಲಾಗಿದೆ.

ರೂ.3180.00 ಕೋಟಿಗಳನ್ನು ತೆರಿಗೆಯೇತರ ಸ್ವೀಕೃತಿ ಸಂಗ್ರಹಿಸಲು ನಿರೀಕ್ಷಿಸಲಾಗಿದೆ. 2011–12ನೇ ಸಾಲಿನಲ್ಲಿ ಸರ್ಕಾರದ ಅನುದಾನಗಳಿಂದ ಬರುವ ಮೊತ್ತ ರೂ.2377.20 ಕೋಟಿಗಳು. ರೂ.1065.00 ಕೋಟಿಗಳ ಸಾಲಗಳೂ ಒಳಗೊಂಡಂತೆ, ಒಟ್ಟು ಸ್ವೀಕೃತಿಗಳು ರೂ.9112.30 ಕೋಟಿಗಳೆಂದು ಅಂದಾಜಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಆರ್ಥಿಕ ಸಂಪನ್ಮೂಲಗಳನ್ನು ಕ್ರೂಡೀಕರಿಸಲು ಹೆಚ್ಚು ಒತ್ತು ನೀಡಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸದಸ್ಯರುಗಳಿಗೆ ನಾನು ಅಭಾರಿಯಾಗಿರುತ್ತೇನೆ.




**ಅನುದಾನಗಳು**

### 38. ಪರಿಸಮಾಪ್ತಿ:

ಗ್ರಾಮೀಣತೆಯ ಸೊಬಗು, ಆಧುನಿಕತೆಯ ಬೆರಗು, ವಿಶ್ವಸಂಸ್ಕೃತಿಯ ಮೆರಗನ್ನು ಮೈಗೂಡಿಸಿಕೊಂಡಿರುವ ಬೆಂಗಳೂರು ನಗರದ ಸರ್ವಾಂಗೀಣ ಅಭಿವೃದ್ದಿಗೆ ಎಲ್ಲರ ಸಹಕಾರ ಕೋರುತ್ತಾ, ಈ ಮುಂಗಡ ಪತ್ರವನ್ನು ಸಿದ್ಧಪಡಿಸಲು ಸಹಕರಿಸಿದ ಪೂಜ್ಯ ಮಹಾಪೌರರು, ಉಪಮಹಾಪೌರರಿಗೆ, ಆಡಳಿತ ಮತ್ತು ಪ್ರತಿಪಕ್ಷದ ನಾಯಕರುಗಳಿಗೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸದಸ್ಯರುಗಳಿಗೆ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೂ ವಂದಿಸುತ್ತಾ ಪಾಲಿಕೆಯ ಸದರಿ ಸಾಲಿನ ಸಂಪನ್ಮೂಲಗಳನ್ನು ಕ್ರೂಢೀಕರಿಸಲು ಉತ್ತಮ ಸಲಹೆಗಳನ್ನು ನೀಡಿ ಆಯವ್ಯಯ ತಯಾರಿಸಲು ಸಹಕರಿಸಿದ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಆರ್.ಅಶೋಕ್ ರವರಿಗೂ, ನಗರದ ಶಾಸಕರುಗಳಾದ ಶ್ರೀ ಬಿ.ಎನ್.ವಿಜಯಕುಮಾರ್ ಹಾಗೂ ಡಾ: ಸಿ.ಎನ್.ಅಶ್ವತ್‌ನಾರಾಯಣ್ ರವರುಗಳಿಗೆ ಹಾಗೂ ಬೆಂಗಳೂರು ನಗರದ ಎಲ್ಲಾ ವಿಧಾಸಭಾ ಹಾಗೂ ವಿಧಾನ ಪರಿಷತ್ತಿನ ಸದಸ್ಯರಿಗೂ ಮತ್ತು ಮಾನ್ಯ ಆಯುಕ್ತರಾದ ಶ್ರೀ ಸಿದ್ಧಯ್ಯನವರಿಗೆ ವಿಶೇಷವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ಹಾಗೂ ಪಾಲಿಕೆಯ ವಿಶೇಷ ಆಯುಕ್ತರು, ಮುಖ್ಯ ಲೆಕ್ಕಾಧಿಕಾರಿಗಳು, ಮುಖ್ಯ ಆರ್ಥಿಕ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಸಲಹೆಗಾರರು ಹಾಗೂ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿರುವ ಎಲ್ಲಾ ಅಧಿಕಾರಿ/ಸಿಬ್ಬಂಧಿಗಳಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತಾ, ಈ ಮುಂಗಡ ಪತ್ರವನ್ನು ಮಂಡಿಸಿ ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಎಲ್ಲರಿಗೂ ವಂದನೆಗಳು**

**"ಎಲ್ಲಾ ಭೇದ ಮರೆತು, ಬನ್ನಿರಿ ನಾವು ಸಮಾನ, ಕೆಂಪೇಗೌಡರ ಭವ್ಯ ಬೆಂಗಳೂರಿನ ಕನಸನ್ನು ನನಸು ಮಾಡೋಣ"**

**ಜೈ ಹಿಂದ್, ಜೈ ಕರ್ನಾಟಕ, ಜೈ ಬೆಂಗಳೂರು**

## Budget Presentation of Bruhat Bengaluru Mahanagara Palike for the Year 2011-12

### SRI.G.MANJUNATHA RAJU

### CHAIRMAN, TAXATION AND FINANCE COMMITTEE

Worshipful Mayor, Hon'ble Deputy Mayor, Hon'ble Ministers, Hon'ble Members of Parliament, Hon'ble Members of Legislative Assembly & Council, Ruling Party Leader, Leader of Opposition Party, my colleague Corporators, Commissioner, Officers of BBMP and my Media friends,

I rise to present the **BBMP Budget for 2011-12**.

Freedom means equality, equality leads to co-existence, co-existence implies to humanity. Humanity path is the roadmap for development. BJP's goal is to travel in the path of development. This is really a boon for Bangaloreans.

Once a small hamlet of villages, Bengaluru, today has grown into a metropolitan city. This rapid metamorphosis is due to historical, geographical and strategic location of Bengaluru. The credit goes to the founder of this great city **Nadaprabhu Kempegowda**.

